12. ಗಮನ ಸೆಳೆಯುವ ಸೂಚನೆ

ವಿಷಯ :- ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯಲ್ಲಿ ವಿಳಂಬದ ಬಗ್ಗೆ

ಶ್ರೀ ಆರ್. ಧ್ರುವನಾರಾಯಣ್ (ಸಂತೆ ಮರಳ್ಳಿ) :- ಮಾನ್ಯ ಅಧ್ಯಕ್ಷರೆ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯಲ್ಲಿ ವಿಳಂಬವಾಗಿರುವ ಬಗ್ಗೆ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು, ಸಮಾಜ ಕಲ್ಯಾಣ ಸಚಿವರ ಪರವಾಗಿ) :- ರಾಜ್ಯದ ವಿವಿಧ ಇಲಾಖೆ/ ನಿಗಮ/ ಮಂಡಳಿ/ ಅನುದಾನಿತ ಸಂಸ್ಥೆಗಳು/ ವಿಶ್ವವಿದ್ಯಾನಿಲಯಗಳು/ ಸಹಕಾರಿ ಸಂಸ್ಥೆಗಳು/ ಕಂಪನಿಗಳು ಇತ್ಯಾದಿ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದವರ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ ಅವುಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರವು ದಿನಾಂಕ 21-11-2001 ರಂದು ಅಧಿಸೂಚನೆ ಹೊರಡಿಸಿದೆ. ನಂತರ ಈ ಅಧಿಸೂಚನೆಯಲ್ಲಿನ ಕೆಲವು ನಿಯಮಗಳಿಗೆ ತಿದ್ದುಪಡಿ ತಂದು ದಿನಾಂಕ 01-06-2002 ರಲ್ಲಿ ಆದೇಶ ಹೊರಡಿಸಿದೆ. ಈ ಆದೇಶದನ್ವಯ ಇಲಾಖೆಗಳಲ್ಲಿನ ಗ್ರೂಪ್ 'ಸಿ' ವೃಂದದ ಹುದ್ದೆಗಳಿಗೆ ಇಲಾಖಾ ಮುಖ್ಯಸ್ಥರು ಹಾಗೂ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗ ಇವರುಗಳು ನೇಮಕಾತಿ ಪ್ರಾಧಿಕಾರಿಗಳಾಗಿರುತ್ತಾರೆ. ಅದೇ ರೀತಿ ಇತರೆ ಸಂಸ್ಥೆಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳಿಗೆ ಆಯಾ ಸಂಸ್ಥೆಗಳ ಇಲಾಖಾ ಮುಖ್ಯಸ್ಥರುಗಳು ನೇಮಕಾತಿ ಪ್ರಾಧಿಕಾರಿಗಳಾಗಿರುತ್ತಾರೆ. ಈ ನೇಮಕಾತಿಗಳನ್ನು ವಯಸ್ಸು ಮತ್ತು ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಈ ನಿಯಮಗಳನ್ನು ಆಧಾರವಾಗಿಟ್ಟುಕೊಂಡು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

ಈ ಆದೇಶ ಜಾರಿಗೆ ಬಂದಾಗಿನಿಂದ ಡಿಸೆಂಬರ್ 2006 ರವರೆಗೆ ನೇಮಕಾತಿ ಸಂಸ್ಥೆಗಳಲ್ಲೂ ಗುರುತಿಸಿ ಭರ್ತಿ ಮಾಡಲಾಗಿರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇದೆ.

1. ಗುರುತಿಸಲಾದ ಒಟ್ಟು ಹುದ್ದೆಗಳು –	18,994
2. ಇವುಗಳಲ್ಲಿ ಪ್ರಕಟಣೆ ಹೊರಡಿಸಿದ ಹುದ್ದೆಗಳು –	15,671

3. ವಿವಿಧ ಹುದ್ದೆಗಳಿಗೆ ಆಯ್ಕೆ ಮಾಡಲ್ಪಟ್ಟ ಅಭ್ಯರ್ಥಿಗಳ ಸಂಖ್ಯೆ– 14,311

4. ಆಯ್ಕೆ ಮಾಡಲ್ಪಟ್ಟ ಅಭ್ಯರ್ಥಿಗಳಲ್ಲಿ ನೇಮಕಾತಿ ಹೊಂದಿದ ಅಭ್ಯರ್ಥಿಗಳ ಸಂಖ್ಯೆ – 13,615

5. ನೇಮಕಾತಿಗೆ ಹುದ್ದೆಗಳು ಖಾಲಿ ಇರುವುದಿಲ್ಲವಾದ್ದರಿಂದ ಮುಂದೆ ಭರ್ತಿ ಮಾಡಲಾಗುವ ಹುದ್ದೆಗಳ ಸಂಖ್ಯೆ – 2,607

6. ನಷ್ಟದಲ್ಲಿರುವ ಉದ್ದಿಮೆ/ಸಂಸ್ಥೆಗಳಲ್ಲಿನ ಹುದ್ದೆಗಳಿಗೆ ವಿನಾಯಿತಿ ನೀಡಿರುವ ಹುದ್ದೆಗಳ ಸಂಖ್ಯೆ – 225

7. ಇನ್ನೂ ಪ್ರಕಟಣೆಗೆ ಬಾಕಿ ಉಳಿದಿರುವ ಹುದ್ದೆಗಳ ಸಂಖ್ಯೆ – 491

ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣಗಳು :

(1) ಪ್ರಮುಖವಾಗಿ ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಪಡೆದು ನೇಮಕಾತಿ ಆದೇಶ ನೀಡಬೇಕಾಗಿರುತ್ತದೆ. ಸಿಂಧುತ್ವ ಪತ್ರ ಪಡೆಯಲು ಕೆಲವು ಪ್ರಕರಣಗಳಲ್ಲಿ ವಿಳಂಬವಾಗಿರುವುದು.

(2) ಕೆಲವು ಇಲಾಖೆಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದ್ದರೂ, ಅಭ್ಯರ್ಥಿಗಳು ನಿಗದಿತ ಸಮಯದಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಮುಖ್ಯ ಪಟ್ಟಿಯಲ್ಲಿ ನೇಮಕ ಹೊಂದಿದ ಅಭ್ಯರ್ಥಿಗೆ ಅಂತಿಮ ನೋಟೀಸು ನೀಡುವುದರ ಮೂಲಕ ಮತ್ತೊಂದು ಅವಕಾಶ ನೀಡಿದ ನಂತರವೂ ನೇಮಕಾತಿ ತಿರಸ್ಕರಿಸಿದಲ್ಲಿ ಹೆಚ್ಚುವರಿ ಪಟ್ಟಿಯನ್ನು ಜಾರಿ ಮಾಡಬೇಕಾಗಿರುತ್ತದೆ. ಈ ಪ್ರಕ್ರಿಯೆಗೆ ಹೆಚ್ಚು ಕಾಲಾವಕಾಶ ಹಿಡಿಯುತ್ತದೆ.

(3) ಕೆಲವು ಇಲಾಖೆ/ ನಿಗಮ/ ಮಂಡಳಿ/ ವಿಶ್ವವಿದ್ಯಾನಿಲಯಗಳಲ್ಲಿನ ತಾಂತ್ರಿಕ ಹುದ್ದೆಗಳಿಗೆ ಹಾಗೂ ಬೋಧಕರ ಹುದ್ದೆಗಳಿಗೆ ಹಲವು ಬಾರಿ ಪ್ರಕಟಣೆ ನೀಡಿದ್ದಾಗ್ಯೂ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಕಾರಣ, ಮರು ಪ್ರಕಟಣೆ ಹೊರಡಿಸಲಾಗುತ್ತದೆ.

(4) ಪ್ರಕಟಣೆ ಹೊರಡಿಸಲು ಬಾಕಿ ಇರುವ 491 ಬ್ಯಾಕ್‌ಲಾಗ್ ಹುದ್ದೆಗಳನ್ನು ಇತ್ತೀಚೆಗೆ ಗುರುತಿಸಿ ನೇಮಕಾತಿ ಪ್ರಾಧಿಕಾರಿಗಳಿಗೆ ತಿಳಿಸಲಾಗಿರುವುದರಿಂದ ಪ್ರಕಟಣೆಗೆ ವಿಳಂಬವಾಗಿರುತ್ತದೆ.

ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರವು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಆಗಾಗೆ ಸಭೆ ಸೇರಿ ಹುದ್ದೆಗಳ ಭರ್ತಿಯಲ್ಲಿ ಆಗಿರುವ ಪ್ರಗತಿ, ಹುದ್ದೆಗಳ ಭರ್ತಿಯಲ್ಲಿ ಇರುವ ತೊಂದರೆಗಳು ಇತ್ಯಾದಿಗಳನ್ನು ಚರ್ಚಿಸಿ ಸೂಕ್ತ ಪರಿಹಾರ ಹಾಗೂ ಮಾರ್ಗೋಪಾಯಗಳನ್ನು ಸೂಚಿಸುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿಯವರೆಗೆ ಒಟ್ಟು 14,311 ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಭ್ಯರ್ಥಿಗಳನ್ನು ವಿವಿಧ ಇಲಾಖೆ/ ಸಂಸ್ಥೆಗಳಲ್ಲಿನ ವಿವಿಧ ವೃಂದದ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ. ಅಂಕಿ ಅಂಶಗಳ ಪ್ರಕಾರ ನೇಮಕಾತಿಗೆ ಕ್ರಮ ಕೈಗೊಳ್ಳಬೇಕಾದ ಹುದ್ದೆಗಳ ಸಂಖ್ಯೆ ಬಹಳ ಕಡಿಮೆ ಇದ್ದು, ಈಗಾಗಲೇ ಈ ಹುದ್ದೆಗಳ ಪ್ರಕಟಣೆಗೂ ಸಹ ಕ್ರಮ ಕೈಗೊಳ್ಳಲಾಗಿದೆ. ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಕಾರ್ಯವು ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಈಗಾಗಲೇ ಬಹಳಷ್ಟು ಹುದ್ದೆಗಳನ್ನು ತುಂಬಲಾಗಿದೆ. ಉಳಿದ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಸರಕಾರವು ಈಗಾಗಲೇ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

ಶ್ರೀ ಎನ್. ಚೆಲುವರಾಯಸ್ವಾಮಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಧ್ರುವನಾರಾಯಣ್‌ರವರು ಗಮನ ಸೆಳೆಯುವ ಸೂಚನೆಯಡಿಯಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಬಹುಶಃ ಸರ್ಕಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಲ್ಲಿ ಕಂಟಿನ್ಯುಸ್ ಪ್ರೊಸೆಸ್ ನಡೆಯುತ್ತಿದೆ. ಸರ್ಕಾರದ ಮೊದಲ ಆದ್ಯತೆಯಲ್ಲಿ ನೇಮಕಾತಿ ಪಾಲಿಸಿಯಲ್ಲಿ ಅನೇಕ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಬೇಕೆಂಬುದರ ಬಗ್ಗೆ ಗಮನವನ್ನು ಹರಿಸುತ್ತದೆಯೋ, ಅದಕ್ಕಿಂತ ಮೊದಲ ಆದ್ಯತೆಯನ್ನು ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರತಿ ಇಲಾಖೆಯಲ್ಲಿ ತುಂಬುವುದರ ಬಗ್ಗೆ ಈಗಾಗಲೇ ಕ್ರಮವನ್ನು ತೆಗೆದುಕೊಳ್ಳುತ್ತಾ ಬಂದಿದೆ. ಬಹುಶಃ ಅವರಿಗೆ ಯಾವ ರೀತಿಯ ಮಾಹಿತಿಯನ್ನು ಕೊಟ್ಟಿದ್ದಾರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲದಿರುವುದರಿಂದ, ನಾವು ಇದನ್ನು ನಿಲ್ಲಿಸತಕ್ಕಂತಹ ಪ್ರಶ್ನೆ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇವೆ, ಕಂಟಿನ್ಯೂಸ್ ಪ್ರೊಸೆಸ್‌ನಲ್ಲಿದೆ. ಆದಷ್ಟು ಬೇಗ ನೂರಕ್ಕೆ ನೂರರಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದಕ್ಕೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ, ಅನೇಕ ಬಾರಿ ಎಲ್ಲಾ ಇಲಾಖೆಗಳಿಗೆ ಸೂಚನೆಯನ್ನು ಕೊಟ್ಟಿದೆ, ಇನ್ನೂ ಸಹ ನಿರ್ದಿಷ್ಟವಾಗಿ ಆ ಸದಸ್ಯರನ್ನು ಕರೆಯಿಸಿ ಸಚಿವರೊಡನೆ ಮಾತನಾಡಿಸಿ ಎಲ್ಲಿ ಅದು ನಿಧಾನವಾಗಿದೆ ಅದನ್ನು ಕೂಡಲೇ ಮುಂದುವರೆಸುವುದಕ್ಕೆ, ಕಂಟಿನ್ಯೂ ಮಾಡುವುದಕ್ಕೆ, ಕಂಪ್ಲೀಟ್ ಮಾಡುವುದಕ್ಕೂ ಸಹ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಶಿವಾನಂದ ಪಾಟೀಲ್ :– ಗಮನ ಸೆಳೆಯುವ ಸೂಚನೆಗೆ ತಾವು ಉತ್ತರವನ್ನು ಓದಿ, ನಂತರ ಇದನ್ನು ಹೇಳಬೇಕಾಗಿತ್ತು.

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಈ ವಿಚಾರ ಬಂದಾಗ ಸಚಿವರಿರಲಿಲ್ಲ, ಈಗಲೂ ಇಲ್ಲ. ಹೋಗಲಿ ಆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಲಿ, ಆಯುಕ್ತರಾಗಲಿ ಈ ವಿಷಯ ಬಂದಾಗ ಇಲ್ಲವೆಂದರೆ ಹೇಗೆ? ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದಲ್ಲಿ ಎಷ್ಟು ತಾತ್ಸಾರ ಮನೋಭಾವನೆ ಇದೆ ಎಂಬುದನ್ನು ನೋಡಿದಾಗ ನಿಜವಾಗಿಯೂ ನನಗೆ ನೋವಾಗುತ್ತದೆ. ಕಳೆದ ಅಧಿವೇಶನ ನಡೆದು ಮೂರು ತಿಂಗಳಾಯಿತು, ಪುನಃ ಈ ಅಧಿವೇಶನ ಬಂತು.

ಅಧ್ಯಕ್ಷರು :– ಈಗ ತಾವು, ಸಂಬಂಧಪಟ್ಟವರಿಲ್ಲವೆಂದು ಹೇಳುತ್ತಿದ್ದೀರಿ, ನಿಜ, ಹಿಂದೆ ಈ ವಿಷಯ ಪ್ರಸ್ತಾಪ ಮಾಡಿದಾಗಲು ಸಂಬಂಧಪಟ್ಟವರಿಲ್ಲವೆಂದು ಹೇಳುತ್ತಿದ್ದೀರಿ, ಇನ್ಯಾವುದಾದರೂ ಸಮಯದಲ್ಲಿ ಉತ್ತರವನ್ನು ಕೊಡುತ್ತಾರೆ. ಈಗ ಬಿಟ್ಟರೆ ಇನ್ನು ಮಳೆಗಾಲದ ಅಧಿವೇಶನವನ್ನು ಕರೆಯುವುದು. ಆದರೆ ನಮಗೇನಾಗಿದೆ ಎಂದರೆ, ಇಲ್ಲಿ ಸಾಕಷ್ಟು ಸಚಿವರುಗಳು ಕೂಡ ಇದ್ದಾರೆ, ನಾನು ಅವರಲ್ಲಿ ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಹಿಂದೆ ಸುಮಾರು 17,000 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿತ್ತು. ಸುಮಾರು 14,000 ಹುದ್ದೆಗಳು ಭರ್ತಿಯಾಗಿವೆ. ಸುಮಾರು 3,600 ಹುದ್ದೆಗಳು ಖಾಲಿ ಇವೆ. ಕಳೆದ ಒಂದು ವರ್ಷದಂದಲೂ ಕೂಡ ಸರಿಯಾದ ರೀತಿಯಲ್ಲಿ ಭರ್ತಿಯಾಗುತ್ತಿಲ್ಲ, ಜಾಹೀರಾತು ಆಗುತ್ತಿಲ್ಲ. ಭರ್ತಿ ಮಾಡುವುದರಲ್ಲಿ ಬಹಳಷ್ಟು ವಿಳಂಬ ಧೋರಣೆಯಾಗುತ್ತಿದೆ. ತಮಗೆ ಗೊತ್ತಿದೆ, ಹಲವಾರು ಕಡೆ ಚಳುವಳಿಗಳು ನಡೆದಿವೆ. ಗುಲ್ಬರ್ಗಾದಲ್ಲಿ ಯುವಕರು ಅಮರಣಾಂತ ಚಳುವಳಿಯನ್ನು ನಡೆಸಿದರು.

ಆಗ ಮುಖ್ಯಮಂತ್ರಿಗಳೇ ಅಲ್ಲಿಗೆ ಹೋಗಿ, ನಾನು ಇನ್ನೊಂದು ತಿಂಗಳಲ್ಲಿ ಜಾಹೀರಾತು ಪ್ರಕಟಣೆ ಮಾಡಿಸಿ ಭರ್ತಿ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು. ಅದಾದ ಮೇಲೆ ಕಳೆದ ಅಧಿವೇಶನದಲ್ಲಿ ಬೆಂಗಳೂರಿನಲ್ಲಿ ಸುಮಾರು ಒಂದು ಕಾಲ ನಿರುದ್ಯೋಗಿ ಯುವಕರು ಚಳುವಳಿ ಮಾಡಿದರು ಉಪವಾಸ ಕುಳಿತರು. ಆದರೂ ಇನ್ನು ಕೂಡ ಸರ್ಕಾರ ಒಂದು ವರ್ಷದಿಂದ ಏನು 3,600 ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ ಅವನ್ನು ತುಂಬಿಲ್ಲ, ತತ್‌ಕ್ಷಣ ತಾವು ಅವನ್ನು ಭರ್ತಿ

ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇಲಾಖೆಯ ಕಾರ್ಯದರ್ಶಿ ಇಲ್ಲ, ಒಬ್ಬರು ಇಲ್ಲ, ಕಾರ್ಯಕಲಾಪ ಪಟ್ಟಿಯಲ್ಲಿ ಈ ವಿಷಯವಿದೆ. ಅದರಲ್ಲಿದ್ದ ಮೇಲೆ, ಗಮನ ಸೆಳೆಯುವ ಸೂಚನೆಯನ್ನು ಕೇಳಿದ ಮೇಲೆ, ಕಳೆದ ಸಾರಿಯೂ ಸಚಿವರಿಲ್ಲ, ಅವರಿಲ್ಲವೆಂದರೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಲ್ಲ, ಆಯುಕ್ತರಿಲ್ಲ. ದಯಮಾಡಿ 3,600 ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ :– ಒಟ್ಟು ಗುರುತಿಸಲಾದ ಹುದ್ದೆಗಳು 18,994 ಇವುಗಳಲ್ಲಿ ಪ್ರಕಟಣೆ ಹೊರಡಿಸಿದ್ದ ಹುದ್ದೆಗಳು 15,671 ವಿವಿಧ ಹುದ್ದೆಗಳಿಗೆ ಆಯ್ಕೆ ಮಾಡಲ್ಪಟ್ಟ ಅಭ್ಯರ್ಥಿಗಳ ಸಂ: 14,311 ಆಯ್ಕೆ ಮಾಡಲ್ಪಟ್ಟ ಅಭ್ಯರ್ಥಿಗಳಲ್ಲಿ ನೇಮಕಾತಿ ಹೊಂದಿದ ಅಭ್ಯರ್ಥಿಗಳ ಸಂ: 13,615 ನೇಮಕಾತಿಗೆ ಹುದ್ದೆಗಳು ಖಾಲಿ ಇರುವುದಿಲ್ಲವಾದ್ದರಿಂದ ಮುಂದೆ ಭರ್ತಿ ಮಾಡಲಾಗುವ ಹುದ್ದೆಗಳ ಸಂ: 2,607 ನಷ್ಟದಲ್ಲಿರುವ ಉದ್ದಿಮೆ/ ಸಂಸ್ಥೆಗಳಲ್ಲಿನ ಹುದ್ದೆಗಳಿಗೆ ವಿನಾಯಿತಿ ನೀಡಿರುವ ಹುದ್ದೆಗಳ ಸಂ: 225 ಇನ್ನೂ ಪ್ರಕಟಣೆಗೆ ಬಾಕಿ ಉಳಿದಿರುವ ಸಂ: 491. ಈಗ ತಾವೇನು 3600 ಹುದ್ದೆಗಳು ತುಂಬಬೇಕೆಂದು ಹೇಳಿದ್ದೀರಿ. ವಾಸ್ತವವಾಗಿ ತತ್‌ಕ್ಷಣ ಖಾಲಿ ಇಲ್ಲದಿರುವ ಹುದ್ದೆಗಳು 2,607 ಇರುವುದಿಂದ, ಮುಂದಿನ ನೇಮಕಾತಿಯಲ್ಲಿ ಮೊದಲು ಅದಕ್ಕೆ ನಾವು ಆದ್ಯತೆಯನ್ನು ಕೊಟ್ಟು ಅದನ್ನು ಭರ್ತಿ ಮಾಡುತ್ತೇವೆ. ಸರ್ಕಾರ, ಇಲಾಖೆ ಉತ್ತರವನ್ನು ಕೊಟ್ಟಿದೆ. ಇವತ್ತು ನೀವೇನು ಈ ಬಗ್ಗೆ ಬಹಳ ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದೀರಿ, ಈ ಬಗ್ಗೆ ಸರ್ಕಾರವು ಸಹ ಯಾವುದೇ ತರಹ ನಿಧಾನ ಧೋರಣೆ ತೋರಿಸುವ ಪ್ರಶ್ನೆ ಇಲ್ಲ. ಈ ತರಹ ಬ್ಯಾಕ್‌ಲಾಗ್ ಹುದ್ದೆಗೆ ಹೆಚ್ಚಿನ ಒತ್ತು ಕೊಡುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. 18,994 ಹುದ್ದೆಗಳನ್ನು ಗುರುತಿಸಲಾಗಿದೆ, ಇದು ಇವತ್ತಿನದಲ್ಲ. ನಾನು ಹೇಳಿದರೆ ಸಿಟ್ಟು ಮಾಡಿಕೊಳ್ಳಬಾರದು, ನಿಮ್ಮದೇಪಕ್ಷ 40 ವರ್ಷ ಇಲ್ಲಿ ಆಡಳಿತವನ್ನು ಮಾಡಿದೆ. ಈಗ ನಮ್ಮ ಸಮ್ಮಿಶ್ರ ಸರ್ಕಾರ ಬಂದಿದೆ. 10–15 ವರ್ಷ ಸರ್ಕಾರ ಮಾಡಿರುವುದನ್ನು ಹೇಳುತ್ತೇವೆ. 40 ವರ್ಷ ಆಡಳಿತ ಮಾಡಿದರು, ಮಾತನಾಡಿದರೆ, ನಾವು ಹಿಂದುಳಿದವರ, ಹರಿಜನರ, ಹಿಂದುಳಿದ ವರ್ಗದವರ ಪರ ಎಂದು ಹೇಳಿಕೊಂಡು ಬಂದಿರುವುದನ್ನು ನೋಡಿದ್ದೇವೆ. ಇವತ್ತು ನಮ್ಮ ಕಾರ್ಯಕ್ರಮಗಳು, ನಾವು ಮಾಡುತ್ತಿರುವ ಕೆಲಸಗಳು, ಈ ತರಹ ಯಾವುದೇ ಹುದ್ದೆಗಳನ್ನು ಭರ್ತಿ ಮಾಡುವುದಾಗಲಿ, ಇಲಾಖೆಯದಾಗಲಿ ಚರ್ಚೆ ನಡೆದರೆ ಚರ್ಚೆಯ ಸಮಯದಲ್ಲಿ

ಉತ್ತರವನ್ನು ಕೊಡೋಣ, ಈಗ 10 ಗಂಟೆಯಾಗಿದೆ ಅದಕ್ಕೆ ಸೂಕ್ತ ಸಮಯವಲ್ಲ. ದಯಮಾಡಿ, ನಿಮ್ಮನ್ನು ವಿಶೇಷವಾಗಿ ಕೊಠಡಿಗೆ ಅಹ್ವಾನ ಮಾಡಿ, ಇದರ ಬಗ್ಗೆ ಮಾಹಿತಿಯನ್ನು ತೆಗೆದುಕೊಂಡು, ತತ್‌ಕ್ಷಣ ಕ್ರಮತೆಗೆದುಕೊಳ್ಳುತ್ತೇವೆ ಎಂದು ನಾನು ಹೇಳಿದ್ದೇನೆ. ನಾನೇ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ, ಮಂತ್ರಿ, ನಾನೇ ನಿಮ್ಮ ಜೊತೆಯಲ್ಲಿರುತ್ತೇನೆ. ಕುಳಿತುಕೊಂಡು ಅಧಿಕಾರಿಗಳನ್ನು ಕರೆಯಿಸಿ ಚರ್ಚೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ, ದಯಮಾಡಿ ಸಮಾಧಾನವಾಗಿರುವುದು.

ಅಧ್ಯಕ್ಷರು :– ಮತ್ತೆ ನೀವು (ಧ್ರುವನಾರಾಯಣ್) ಮಾತನಾಡಿದರೆ ಏನು ಪ್ರಯೋಜನವಾಗುವುದಿಲ್ಲ, ಸಂಬಂಧಪಟ್ಟ ಸಚಿವರಿಲ್ಲ, ಆ ವಿಚಾರವನ್ನು ಸಂಬಂಧಪಟ್ಟ ಸಚಿವರಿಗೆ ತಿಳಿಸುತ್ತೇವೆಂದು ಹೇಳಿದ್ದಾರೆ ಕುಳಿತುಕೊಳ್ಳಿ.

(10 : 00)

ಶ್ರೀ ಎಸ್. ಧ್ರುವನಾರಾಯಣ್ :– ಮಾನ್ಯ ಅಧ್ಯಕ್ಷರೆ, 17,000 ಹುದ್ದೆಗಳನ್ನು ಏನು ಗುರುತಿಸಿದರೋ ಸಮಾಜಕಲ್ಯಾಣ ಸಚಿವರಾಗಿದ್ದಾಗ 17,000 ಹುದ್ದೆಗಳನ್ನು ಗುರುತಿಸಿ ಕೇವಲ ಐದು ವರ್ಷಗಳಲ್ಲಿ ಸುಮಾರು 13,000 ಹುದ್ದೆಗಳನ್ನು ಭರ್ತಿ ಮಾಡಿದರು. ಅದಾದ ನಂತರ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಖರ್ಗೆಯವರು ಬ್ಯಾಕ್‌ಲಾಗ್ ಸಮಿತಿಯ ಅಧ್ಯಕ್ಷರಾಗಿದ್ದಾಗ ಸುಮಾರು 2400 ಹುದ್ದೆಗಳು ಭರ್ತಿ ಆದವು. ಈಗ ಸುಮಾರು 3400 ಹುದ್ದೆಗಳು ಖಾಲಿ ಇವೆ. ಕಳೆದ ಒಂದು ವರ್ಷದಿಂದ ತಮ್ಮ ಸರ್ಕಾರ ಬಂದಾಗಿನಿಂದ ಖಾಲಿ ಹುದ್ದೆಗಳು ಭರ್ತಿ ಆಗುತ್ತಿಲ್ಲ. ದಯಮಾಡಿ ಈ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎನ್. ಚೆಲುರಾಯಸ್ವಾಮಿ :– ಮಾನ್ಯ ಅಧ್ಯಕ್ಷರೆ, ಒಂದು ಪಕ್ಷದ ಪರವಾಗಿ ವಕಾಲತ್ತು ಹಾಕುವ ತರಹ ಮಾತನಾಡುವುದು ಬೇಡ. ಒಬ್ಬರು ಸದಸ್ಯರಾಗಿ ಮಾತನಾಡಿ. ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಯಾವುದು, ಭಾರತ ಸರ್ಕಾರ ಯಾವುದು ಎಂದು ನಮಗೆ ಗೊತ್ತಿದೆ. ಹಿಂದೆಯೂ ನಿಮ್ಮ ಪಕ್ಷ ಸರ್ಕಾರ ಆಡಳಿತ ಮಾಡುವುದಕ್ಕೆ ಜನ ಓಟು ಹಾಕಿ ಗೆಲ್ಲಿಸಿದ್ದಾರೆ. ಈಗ ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ 491 ಎನ್ನುವ ಮಾಹಿತಿ ನನ್ನ ಬಳಿ ಇದೆ.

ಶ್ರೀ ಎಸ್. ಧ್ರುವನಾರಾಯಣ್ :- ಮಾನ್ಯ ಚಲುವರಾಯಸ್ವಾಮಿಯವರೇ ದಯವಿಟ್ಟು ಇದು ತಪ್ಪು ಮಾಹಿತಿ ಇದೆ. ಕಳೆದ ಅಧಿವೇಶನದಲ್ಲಿ ಮಾನ್ಯ ಹೊರಟ್ಟಿಯವರು ಅಧಿಕೃತವಾಗಿ 3400 ಹುದ್ದೆಗಳು ಖಾಲಿ ಇವೆ ಎಂದು ಅವರು ಹೇಳಿದ್ದಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ :- ನಿಮ್ಮ ಸಾಮಾಧನಕ್ಕಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಧ್ರುವನಾರಾಯಣ್ :- ಮಾನ್ಯ ಅಧ್ಯಕ್ಷರೆ, ತಪ್ಪು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ನಾನು ಸಮಜಾಯಿಷಿ ಕೇಳುತ್ತಿದ್ದೇನೆ.

ಶ್ರೀ ಎನ್ ಚೆಲುವರಾಯಸ್ವಾಮಿ :- 2400 ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಇದ್ದೇವೆ. ಆ ಹುದ್ದೆಗಳು ಖಾಲಿ ಇಲ್ಲದೇ ಇರುವುದರಿಂದ ತತ್‌ಕ್ಷಣ ನಾವು ಭರ್ತಿ ಮಾಡುತ್ತೇವೆ ಎನ್ನುವುದನ್ನು ಉತ್ತರದಲ್ಲಿ ಕೊಟ್ಟಿದ್ದೇನೆ. ಒಂದು ಹೆಜ್ಜೆ ಮುಂದಕ್ಕೆ ಹೋಗಿ ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಇನ್ನು ಹೆಚ್ಚಿನ ಮಾಹಿತಿಯನ್ನು ತೆಗೆದುಕೊಂಡು ನಿಮ್ಮನ್ನು ಕರೆದು ಕೂರಿಸಿಕೊಂಡು ಚರ್ಚೆ ಮಾಡಿ ಮಾಡೋಣ. ನಿಮಗಿಂತ ಒಂದು ಹೆಜ್ಜೆ ಹೆಚ್ಚು ಆಸಕ್ತಿ ನಮಗೆ ಇದೆ. ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ನೀವು ಚರ್ಚೆ ಮಾಡುವುದಾದರೆ, ಮಾಡಿ ನನ್ನದೇನು ಅಭ್ಯಂತರವಿಲ್ಲ. ನಾನು ಉತ್ತರವನ್ನು ಎಷ್ಟು ಹೇಳಬೇಕೋ ಅಷ್ಟು ಹೇಳಬೇಕಾಗುತ್ತದೆ.

13. ಪ್ರಕಟಣೆ

ವಿಷಯ :- ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕ 2007 ಅನ್ನು ವಿಧಾನಪರಿಷತ್ ಯಾವುದೇ ತಿದ್ದುಪಡಿಗಳಿಲ್ಲದೇ ಅನುಮೋದಿಸಿರುವ ಬಗ್ಗೆ.

ಅಧ್ಯಕ್ಷರು :- ಈಗ ಒಂದು ಪ್ರಕಟಣೆ ಇದೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡಂತೆ ಸಂದೇಶ ಬಂದಿರುತ್ತದೆ.

ನಿಯಮ 118 ರ ಮೇರೆಗೆ 2007 ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ವಿಧಾನ ಪರಿಷತ್ ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿದೆ ಎಂದು ತಿಳಿಸಿರುತ್ತಾರೆ.